
# ಆರ್ಐಆರ್ಎಸ್ ಶಸ್ತ್ರಚಿಕಿತ್ಸೆಯ

## ನಂತರ ನೋವುರಹಿತ ಜೀವನವನ್ನು ಬದುಕುತ್ತಿರುವ ಮಾನಸಿ

35 ವರ್ಷದ ಮಾನಸಿ (ಹೆಸರು ಬದಲಾಯಿಸಿದೆ) ಮೂರು ತಿಂಗಳಿನಿಂದ ಬಲ ಮೂತ್ರಕೋಶದಲ್ಲಿನ ನೋವು ಹಾಗೂ ರಕ್ತ ಸೋರುವಿಕೆಯಿಂದ ಬಳಲುತ್ತಿದ್ದಳು. ವೈದ್ಯರನ್ನು ಭೇಟಿಮಾಡಿ ಸಲಹೆ ಪಡೆಯಲಾಗಿ ಮೂತ್ರಕೋಶದಲ್ಲಿ ಕಲ್ಲು ಬೆಳೆದಿರುವುದು ಕಂಡುಬಂದಿತ್ತು. ಕಲ್ಲಿನ ತುಣುಕುಗಳನ್ನು ಇಎಸ್ಡಬ್ಲ್ಯುಎಲ್ (ಎಕ್ಸ್ಟ್ರಾಕಾರ್ಪೋರಲ್ ಶಾಕ್‌ವೇವ್ ಲಿಥೋಟ್ರಿಪ್ಸಿ) ಚಿಕಿತ್ಸೆಯ ಮೂಲಕ ತೆಗೆದು ಹಾಕುವಂತೆ ವೈದ್ಯರು ಅವಳಿಗೆ ಸೂಚಿಸಿದರು. ಈ ಚಿಕಿತ್ಸೆಯ ನಂತರವೂ ಅವಳು ಮೂತ್ರಕೋಶದಲ್ಲಿನ ನೋವು ಹಾಗೂ ರಕ್ತಸೋರುವಿಕೆಯಿಂದ ಬಳಲುತ್ತಿದ್ದಳು. ಪುನಃ ಸಿಟಿ ಸ್ಕ್ಯಾನನ್ನು ಮಾಡಲಾಗಿ ಮೂತ್ರಕೋಶದಲ್ಲಿ ಕಲ್ಲು ಇನ್ನೂ ಇರುವುದು ಪತ್ತೆಯಾಯಿತು. ನಂತರ ಅವಳಿಗೆ ಪಿಸಿಎನ್ಎಲ್ (ಪ್ರೆಕ್ಯುಟೇನಿಯಸ್ ನೆಫ್ರೋಲಿಥೋಟೊಮಿ) ಶಸ್ತ್ರಚಿಕಿತ್ಸೆಯನ್ನು ಸೂಚಿಸಲಾಯಿತು. ಅವಳು ಬೆಂಗಳೂರಿನ ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿರುವ ಫೋರ್ಟಿಸ್ ಆಸ್ಪತ್ರೆಗೊಮ್ಮೆ ಭೇಟಿನೀಡಿ ವೈದ್ಯರ ಸಲಹೆ ಪಡೆಯಲು ತೀರ್ಮಾನಿಸಿದಳು. ಆಕೆಯನ್ನು ಪರೀಕ್ಷಿಸಿದ ಅಲ್ಲಿನ ಮೂತ್ರಕೋಶ ಶಸ್ತ್ರಚಿಕಿತ್ಸಾ ತಜ್ಞ ಡಾ.ದಿನೇಶ್ ವೈದ್ಯ ಅವರು ಸಿಟಿ ಸ್ಕ್ಯಾನ್ ಮಾಡಲಾಗಿ ಮೂತ್ರಕೋಶದಲ್ಲಿ ಕಲ್ಲು ಬೆಳೆದಿರುವುದನ್ನು ಖಚಿತಪಡಿಸಿದರು ಹಾಗೂ ರಿಟ್ರೋಗ್ರೇಡ್ ಇಂಟರ್ನಲ್ ಸರ್ಜರಿ (ಆರ್ಐಆರ್ಎಸ್)ಯನ್ನು ಮಾಡಿಸಿಕೊಳ್ಳುವಂತೆ ಸೂಚಿಸಿದರು. ಅದರಂತೆಯೆ ಸಾಮಾನ್ಯ ಅರಿವಳಿಕೆ ಚುಚ್ಚುಮದ್ದನ್ನು ನೀಡಿ ಹೊಲ್ಮಿಯಂ ಲೇಸರ್ ಚಿಕಿತ್ಸೆಯ ಮೂಲಕ ಕಲ್ಲನ್ನು ಸಂಪೂರ್ಣವಾಗಿ ಛಿದ್ರಗೊಳಿಸಿ ತೆಗೆಯಲಾಯಿತು. ಶಸ್ತ್ರಚಿಕಿತ್ಸೆಯ ನಂತರ ಸ್ಟೆಂಟನ್ನು ಒಳಸೇರಿಸಲಾಗಿತ್ತು. ಚಿಕಿತ್ಸೆಯ 24 ಗಂಟೆಗಳೊಳಗೆ ಅವಳನ್ನು ಆಸ್ಪತ್ರೆಯಿಂದ ಬಿಡುಗಡೆಗೊಳಿಸಿ ಮನೆಗೆ ಕಳಿಸಲಾಯಿತು. ಈ ಪ್ರಕ್ರಿಯೆಯಿಂದಾಗಿ ತೆರೆದ ಶಸ್ತ್ರಚಿಕಿತ್ಸೆಯ ವಿಪರೀತ ನೋವನ್ನು ತಪ್ಪಿಸಲಾಯಿತಲ್ಲದೆ ರೋಗಿಯು ಶೀಘ್ರವಾಗಿ ಹಾಗೂ ಸರಿಯಾದ ರೀತಿಯಲ್ಲಿ ಸಂಪೂರ್ಣ ಗುಣಮುಖವಾಗುವಂತಾಯಿತು.



ಆರ್ಐಆರ್ಎಸ್ ಚಿಕಿತ್ಸೆಯು ಮೂತ್ರಕೋಶದಲ್ಲಿನ ಶಸ್ತ್ರಚಿಕಿತ್ಸೆಗಳನ್ನು ಅತ್ಯಂತ ಕಡಿಮೆ ಭೇದನಗಳ ಮೂಲಕ ಕೈಗೊಳ್ಳಲಾಗುವ ತುಂಬ ಉತ್ತಮವಾದ ಉಪಕ್ರಮವಾಗಿದೆ. ಈ ಶಸ್ತ್ರಚಿಕಿತ್ಸೆಯಲ್ಲಿ ಯುರೆಟೆರೊರೆನೋಸ್ಕೋಪ್ ಎಂಬ ಹಿಗ್ಗುವ ಗುಣವುಳ್ಳ ಉಪಕರಣವನ್ನು ಮೂತ್ರನಾಳದ ಮೂಲಕ ಮೂತ್ರಕೋಶದ ಒಳಗೆ ಸೇರಿಸಲಾಗುತ್ತದೆ. ಒಮ್ಮೆ ಕಲ್ಲು ಕಂಡುಬಂತೆಂದರೆ ಅದನ್ನು ಲೇಸರ್ ಕಿರಣಗಳ ಸಹಾಯದಿಂದ ಛಿದ್ರಗೊಳಿಸಬಹುದಾಗಿದೆ. ನಂತರ ಮೂತ್ರದ ಮುಖಾಂತರ ಈ ಚಿಕ್ಕ ತುಣುಕುಗಳು ಹೊರಬೀಳುತ್ತವೆ.

ಆರ್ಐಆರ್ಎಸ್ ಚಿಕಿತ್ಸೆಯಲ್ಲಿ ಪರಿಣತರಾದ ತಜ್ಞರಷ್ಟೇ ಈ ಶಸ್ತ್ರಚಿಕಿತ್ಸೆಯನ್ನು ನಿರ್ವಹಿಸಲು ಸಾಧ್ಯ. ಸಾಮಾನ್ಯ ಅಥವಾ ಸ್ಪೈನಲ್ ಅರಿವಳಿಕೆ ಚುಚ್ಚುಮದ್ದಿನ ಸಹಾಯದಿಂದ ಶಸ್ತ್ರಚಿಕಿತ್ಸೆಯ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ. ಸಾಮಾನ್ಯವಾಗಿ ಈ ಪ್ರಕ್ರಿಯೆಯು ಕಡಿಮೆ ಅವಧಿಯ ಆಸ್ಪತ್ರೆವಾಸವನ್ನು ಒಳಗೊಂಡಿರುತ್ತದೆ.

ತೆರೆದ ಶಸ್ತ್ರಚಿಕಿತ್ಸೆಯನ್ನು ಮಾಡುವ ಬದಲಾಗಿ ಆರ್ಐಆರ್ಎಸ್ ಚಿಕಿತ್ಸೆಯನ್ನು ಮಾಡುವುದರಿಂದ ಸಮಸ್ಯೆಯು ಶೀಘ್ರವಾಗಿ ಪರಿಹಾರವಾಗುತ್ತದೆ. ಈ ಶಸ್ತ್ರ ಚಿಕಿತ್ಸೆಯ ನಂತರ ದೀರ್ಘಾವಧಿಯ ನೋವು ಇರುವುದಿಲ್ಲ ಹಾಗೂ ಕನಿಷ್ಟ ಪ್ರಮಾಣದ ಭೇದನಗಳೊಂದಿಗೆ ಕೈಗೊಳ್ಳಲಾಗುವ ಈ ಚಿಕಿತ್ಸೆಯಲ್ಲಿ ರೋಗಿಯು ಶೀಘ್ರವಾಗಿ ಗುಣಮುಖ ಹೊಂದುವುದು ಸಾಧ್ಯ. ಜನರು ದೈನಂದಿನ ಕೆಲಸಗಳಲ್ಲಿ ಅವಿಶ್ರಾಂತವಾಗಿ ನಿರತವಾಗಿರುವ ಇಂದಿನ ದಿನಮಾನದಲ್ಲಿ ತಮ್ಮ ಕೆಲಸಗಳಿಂದ ದೀರ್ಘವಾದ ವಿಶ್ರಾಂತಿಯನ್ನು ಪಡೆಯಲು ಸಾಧ್ಯವಾಗುವದಿಲ್ಲ. ಆದ್ದರಿಂದ ಆರ್ಐಆರ್ಎಸ್ ಚಿಕಿತ್ಸೆಯು ಅತ್ಯುತ್ತಮ ವರದಾನವಾಗಿದೆ.

ವೈದ್ಯರು ಯಾವದೇ ರೀತಿಯ ಭೇದನವನ್ನು ಮಾಡದೇ ಮೂತ್ರಕೋಶದೊಳಗೆ ಶಸ್ತ್ರಚಿಕಿತ್ಸೆಯನ್ನು ಮಾಡುವ ಕ್ರಮ ರಿಟ್ರೋಗ್ರೇಡ್ ಇಂಟರ್ನಲ್ ಸರ್ಜರಿ (ಆರ್ಐಆರ್ಎಸ್). ದೇಹದ ಸ್ವಾಭಾವಿಕ ಪ್ರವೇಶದ್ವಾರದ ಮೂಲಕ ಮೂತ್ರನಾಳ, ಮೂತ್ರಕೋಶಗಳೊಳಗೆ ಆರ್ಐಆರ್ಎಸ್ ಉಪಕರಣವನ್ನು ಒಳಸೇರಿಸಲಾಗುತ್ತದೆ. ಮೂತ್ರಕೋಶದಲ್ಲಿ ಕಲ್ಲು ಉತ್ಪಾದನೆಯಾಗಿರುವ, ಮೂತ್ರಕೋಶದೊಳಗೆ ಅಥವಾ ಮೂತ್ರಕೋಶದ ದ್ವಾರವು ಸಂಕುಚಿತವಾಗಿರುವ ಹಾಗೂ ಮೂತ್ರಕೋಶದಲ್ಲಿ ಗಡ್ಡೆಗಳುಂಟಾಗಿರುವ ರೋಗಿಗಳಿಗೆ ಆರ್ಐಆರ್ಎಸ್ ಚಿಕಿತ್ಸೆಯನ್ನು ನೀಡಲಾಗುತ್ತದೆ.

**ಯಾವ ಸಂದರ್ಭಗಳಲ್ಲಿ ಈ ಚಿಕಿತ್ಸೆಯನ್ನು ಕೈಗೊಳ್ಳಲಾಗುತ್ತದೆ?**

ಈ ಕೆಳಗೆ ಹೇಳಲಾಗಿರುವ ಕಷ್ಟಸಾಧ್ಯ ಕೇಸುಗಳ ಚಿಕಿತ್ಸಾ ಸಂದರ್ಭಗಳಲ್ಲಿ ಕನಿಷ್ಟ ಭೇದನಗಳನ್ನು ಹೊಂದಿರುವ ಮೂತ್ರಶಾಸ್ತ್ರ ಶಸ್ತ್ರಚಿಕಿತ್ಸಾ ಕ್ರಮವಾದ ಆರ್ಐಆರ್ಎಸ್ ಪ್ರಕ್ರಿಯೆಯನ್ನು ವಿಶೇಷವಾಗಿ ಕೈಗೊಳ್ಳಬಹುದಾಗಿದೆ.

1. ಇಎಸ್ಡಬ್ಲ್ಯುಎಲ್(ಲಿಥೋಟ್ರಿಪ್ಸಿ) ಚಿಕಿತ್ಸೆಗೂ ಬಗ್ಗದ ದೊಡ್ಡದಾದ ಕಲ್ಲುಗಳು ಉತ್ಪಾದನೆಯಾಗಿದ್ದಾಗ
2. ಈಗಾಗಲೇ ಕೈಗೊಂಡ ಚಿಕಿತ್ಸಾ ಪ್ರಯತ್ನಗಳು ವಿಫಲವಾದಾಗ
3. ನಾಳಗಳು ಸಂಕೋಚನಗೊಂಡ ಸಂದರ್ಭಗಳಲ್ಲಿ
4. ಗಡ್ಡೆಗಳುಂಟಾದ ಸಂದರ್ಭಗಳಲ್ಲಿ
5. ಚಿಕ್ಕ ಮಕ್ಕಳಲ್ಲಿ ಕಲ್ಲುಗಳು ಉತ್ಪತ್ತಿಯಾದ ಸಂದರ್ಭಗಳಲ್ಲಿ
6. ರಕ್ತಸೋರುವಿಕೆ ಕಂಡುಬರುವ ರೋಗಿಗಳಿಗೆ
7. ಅತಿಯಾದ ಬೊಜ್ಜುಳ್ಳ ರೋಗಿಗಳಿಗೆ
8. ಆರ್ಐಆರ್ಎಸ್ ಹಾಗೂ ಇಎಸ್ಡಬ್ಲ್ಯುಎಲ್ ಚಿಕಿತ್ಸೆಗಳ ಸಂಯೋಜನೆಯು ಕೂಡ ವಿಶಿಷ್ಟವಾದ ಚಿಕಿತ್ಸಾ ಆಯ್ಕೆಯಾಗಿದೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 080 4199 4444**

ಫೋರ್ಟಿಸ್ ಆಸ್ಪತ್ರೆ, #14, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು – 560 052.